<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>

**ಸಿಸಿ ನಂಬರ್ 1516/2023**

| | | |
|---|---|---|
| ಸಾಕ್ಷಿಯ ಹೆಸರು | : ಹರೀಶ | ಸಿ.ಡಬ್ಲ್ಯು **6** |
| ತಂದೆಯ ಹೆಸರು | : ಬಸವರಾಜಪ್ಪ | ಪಿ.ಡಬ್ಲ್ಯು **4** |
| ವಯಸ್ಸು | : **31** ವರ್ಷ | |
| ಉದ್ಯೋಗ | : ಕೂಲಿ | |
| ವಾಸ ಸ್ಥಳ | : ಕಾರೇಹಳ್ಳಿ | |

ದಿನಾಂಕಃ**23.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ, ಈಗ ಕೆಲವು ದಿನಗಳ ಹಿಂದೆ ಪೊಲೀಸರು ಶಿವನಿ ಗ್ರಾಮದಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು, ಅದರಲ್ಲಿ ಏನು ಬರೆದಿದ್ದಾರೆ ಮತ್ತು ಯಾವ ಕಾರಣಕ್ಕೆ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ತಿಳಿಸಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯ ಸಹಿ ಇರುವ ದಾಖಲೆ ಜಪ್ತಿ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(**ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲುಃ ಸ.ಸ.ಅ ರರಿಂದಃ</u>

ದಿಃ 18-04-2023 ರಂದು ಅಬಕಾರಿ ಪೋಲೀಸರು ಶಿವನಿ ಕಡೆಯಿಂದ ಅನುವನಹಳ್ಳಿ ಗ್ರಾಮಕ್ಕೆ ಹೋಗುವ ಗಂಗಾದೇವಿ ಪ್ರೌಢ ಶಾಲೆಯ ಎದುರಿನ ರಸ್ತೆಯ ಮೇಲೆ ನನ್ನ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಆರೋಪಿಯು ತನ್ನ ವಾಹನದಲ್ಲಿ ಇಟ್ಟುಕೊಂಡಿದ್ದ 90 ಎಂ.ಎಲ್ ನ ಒಟ್ಟು 47 ರಾಜಾವಿಸ್ಕಿ ಸ್ಯಾಚೆಟುಗಳನ್ನು ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿಯೇ ಪಂಚನಾಮೆಯನ್ನು ಬರೆದು ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಆ ಸಮಯಕ್ಕೆ ನಿಪಿ-2 ರಂತೆ ಭಾವಚಿತ್ರವನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರವರಿಂದಃ

ವಕೀಲರು ಪಾಟೀಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.